ಅ) ಸದರಿ ಪೊತ್ತವು ಬಿಡುಗಡೆಯಾಗಿದೆಯೇ, ಮತ್ತು ಬೇಕಾದ ಹಾಗೂ ಅರ್ಹ ಅಲ್ಪ ಸಂಖ್ಯಾತರ ಅರ್ಜಿದಾರರಿಗೆ ವಿತರಣೆ ಯಾಗಿದೆಯೇ?

ಇ) ನಿಗಮದ ಸಾಲದ ಸೌಲಭ್ಯ ಹೊಂದಿರುವ, ಫಲಾನುಭವಿಗಳ ಸಂಖ್ಯೆ ಹಾಗೂ ಬಡ್ಡಿ ದರವನ್ನು ತಿಳಿಸಿ?

ಈ) ಇಲ್ಲದಿದ್ದಲ್ಲಿ ಅನುಪಯುಕ್ತವಾಗಿ ಬಹಳ ದಿನಗಳ ಕಾಲ ಈ ಪೊತ್ತವನ್ನು ಏಕೆ ಇಟ್ಟಿರುವಿರಿ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಒಂದು ಕೋಟಿ ರೂಪಾಯಿಗಳನ್ನು ೧೯೮೫-೮೬ನೇ ಸಪ್ಲಿಮೆಂಟರಿ ಬಜೆಟ್‌ನಲ್ಲಿ (ಎರಡನೇ ಕಂತು) ಡಿಮ್ಯಾಂಡ್ ಸಂಖ್ಯೆ : ೬೨ರಲ್ಲಿ ಅಳವಡಿಸಲಾಗಿದೆ.

ಆ) ದಿನಾಂಕ ೨೬-೮-೧೯೮೬ ರಂದು ಈಹಣವನ್ನು ಬಿಡುಗಡೆ ಮಾಡಲಾಗಿದೆ. ಆದರೆ ಸಾಲ ಧನ ಯೋಜನೆಗೆ ಸಂಬಂದಿಸಿದರೆ ನೀತಿ ನಿಯಮಗಳನ್ನು ರೂಪಿಸಿದ ನಂತರ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಮಾಡಲಾಗುವುದು.

ಇ) ಮತ್ತು ಈ) } ಮೇಲಿನ (ಅ) ದಲ್ಲಿ ತೋರಿಸಿರುವ ಕಾರಣದಿಂದ ಈ ಪ್ರಶ್ನೆಗಳು. ಉದ್ಭವಿಸುವುದಿಲ್ಲ.

ಕಲಘಟಗಿ ಕ್ಷೇತ್ರದಲ್ಲಿನ ಹಿಂದುಳಿವ ವರ್ಗಗಳ ವಿದ್ಯಾರ್ಥಿನಿಲಯಗಳು

೧೧೭(೫೧೦) ಶ್ರೀ. ಪಿ. ಸಿ. ಸಿದ್ದನಗೌಡ (ಕಲಘಟಗಿ).—ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಕಲಘಟಗಿ ಕ್ಷೇತ್ರದ ೧) ಮುಕ್ತಲ, ೩) ಮಿಕ್ಸಿ ಕೋಟೆ, ೪) ದೇವಿಕೊಪ್ಪ (ಕಲಘಟಗಿ ತಾ.) ೫) ಸುಲ್ಲಿ ೬) ಅರಳೇಕಟ್ಟಿ (ಹುಬ್ಬಳ್ಳಿ ತಾ) ಗಾಮಗಳಲ್ಲಿ ಪ್ರೌಢಶಾಲೆಗಳಿದ್ದು ಅಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯವನ್ನು ಸರ್ಕಾರದ ವತಿಯಿಂದ ಪ್ರಾರಂಭಿಸಲಾಗುವುದೆ ?

ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಆಯವ್ಯಯದಲ್ಲಿ ಒದಗಿಸಲಾಗುವ ಹಣಕಾಸಿನ ಅವಕಾಶದ ಮೇಲೆ ಪರಿಶೀಲಿಸಲಾಗುವುದು.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ವಿ. ಲಕ್ಷ್ಮೀಸಾಗರ್.—ಲಿಖಿತಮೂಲಕ ನೀಡಲಾದ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಲಿಖಿತಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕನ್ನು ಬರಗಾಲ ಪ್ರದೇಶವೆಂದು ಘೋಷಿಸುವುದು

೧೧೭(೧೬) ಶ್ರೀ ಗೋಪಾಲ್ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕಿನಲ್ಲಿ ಸಕಾಲಕ್ಕೆ ಮಳೆ ಬಾರದೆ ರೈತರಿಗೆ ಹಾಗೂ ತೋಟದ ಬೆಳೆಗಾರರಿಗೆ ತುಂಬಾ ತೊಂದರೆಯಾಗಿದ್ದು ಸದರಿ ತಾಲ್ಲೂಕಿನ ಕೆಲವೇ ಭಾಗವನ್ನು ಮಾತ್ರ ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಸಿರಸಿ ಮತ್ತು ಸಿದ್ದಾಪುರ ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲು ಸರಕಾರಕ್ಕಿರುವ ತೊಂದರೆಯೇನು ?